# ಕೆನ್ಯಾ ಕುವರಿ



■ ಪ್ರವೀಣ ಕುಲಕರ್ಣಿ

ಅದೊಂದು ಕೆನ್ಯಾದ ಸಿನಿಮಾ. ಹದಿಮೂರರ ಹರೆಯದ ಶಾಲಾ ವಿದ್ಯಾರ್ಥಿನಿಯೊಬ್ಬಳಿಗೆ, ಅವಳಿಗಿಂತಲೂ ತುಂಬಾ ವಯಸ್ಸಾದ ವ್ಯಕ್ತಿಯೊಂದಿಗೆ, ಬಲವಂತದಿಂದ ಮದುವೆ ಮಾಡಿಸಲು ಹೊರಟಾಗ, ಆ ಹುಡುಗಿ ತಪ್ಪಿಸಿಕೊಂಡು ಹೋದ ಕಥೆಯನ್ನು ಆ ಸಿನಿಮಾ ಹೊಂದಿದೆ. ದಿಬ್ಬಣದ ಮನೆಯಿಂದ ತಪ್ಪಿಸಿಕೊಂಡು ಹೋದ ಆ 'ವಧು', 'ಧರ್ಮಭ್ರಷ್ಟ'ಳಾದರೂ ಶತಮಾನಗಳ ಅನೈತಿಕ ಆಚರಣೆಯನ್ನು ಕೊನೆಗಾಣಿಸಲು ಹೋರಾಡಿದ ಸಾಹಸವನ್ನು ಆ ದೃಶ್ಯಕಾವ್ಯವು ತೆರೆದಿಟ್ಟಿದೆ. 'ನಾವಿ' (Nawi) ಎಂಬುದು ಈ ಸಿನಿಮಾದ ಹೆಸರು. ವಿದ್ಯಾರ್ಥಿನಿಯ ಮುಖ್ಯಪಾತ್ರದಲ್ಲಿ ನಟಿಸಿದವಳು ಮಿಷೆಲ್ ಲೆಮುಯಾ ಇಕೆನಿ ಎಂಬ ಹುಡುಗಿ. ತನ್ನ ಮನೋಜ್ಞ ನಟನೆಗಾಗಿ ಈ ಹುಡುಗಿ ಆಫ್ರಿಕಾ ಮೂವಿ ಅಕಾಡೆಮಿಯಿಂದ 'ಭರವಸೆಯ ತಾರೆ' ಪ್ರಶಸ್ತಿಗೆ ಭಾಜನಳಾಗಿದ್ದಾಳೆ.

'ಯಾವ ವಿಷಯವನ್ನು ನಮ್ಮ ಜನ ಮುಚ್ಚಿಡಲು ಶತಪ್ರಯತ್ನ ಹಾಕುತ್ತಿದ್ದಾರೆಯೋ ಆ ವಿಷಯದ ಕುರಿತು ಚರ್ಚೆಗಳನ್ನು ಹುಟ್ಟುಹಾಕಲು ಈ ಸಿನಿಮಾ ನೆರವಿಗೆ ಬರಬೇಕು ಎನ್ನುವುದು ನನ್ನಾಸೆ' ಎನ್ನುತ್ತಾಳೆ ಮಿಷೆಲ್. ಈ ಹುಡುಗಿಯದು ಕೆನ್ಯಾದ ತುರ್ಕಾನಾ ಪ್ರಾಂತ್ಯ. 'ನಾವಿ' ಸಿನಿಮಾದ ನಾಯಕಿಯ ಪ್ರಾಂತ್ಯ ಕೂಡ ಇದೇ ಆಗಿದೆ.

ತುರ್ಕಾನಾದಲ್ಲಿ ಪ್ರತೀ ನಾಲ್ವರು ಹುಡುಗಿಯರ ಪೈಕಿ ಒಬ್ಬಳು ಬಾಲ್ಯವಿವಾಹದ ದವಡೆಗೆ ಬೀಳುತ್ತಿದ್ದಾಳೆ ಎಂದು ವಿಶ್ವಸಂಸ್ಥೆಯ ವರದಿ ಹೇಳಿದೆ. ಆದ್ದರಿಂದಲೇ 'ನಾವಿ' ಹೇಳುತ್ತಾಳೆ: 'ನನ್ನ ಹಲವು ಗೆಳತಿಯರು ಅರ್ಧದಲ್ಲೇ ಶಾಲೆಬಿಟ್ಟರು. ಅವರು ಮತ್ತೆ ಶಾಲೆಗೆ ಹಿಂದಿರುಗಲೇ ಇಲ್ಲ. ಏಕೆಂದರೆ, ವಧುದಕ್ಷಿಣೆಯ ಆಸೆಗಾಗಿ ಅವರ ಅಪ್ಪಂದಿರು, ಅವರನ್ನು ಮದುವೆ ಮಾಡಿಕೊಟ್ಟರು'.

'ನಾವಿ'ಯ ಅಪ್ಪ, ಅವಳನ್ನು ಮದುವೆ ಮಾಡಿಕೊಡಲು ವರನಿಂದ 60 ಕುರಿಗಳು, ಎಂಟು ಒಂಟೆಗಳು ಹಾಗೂ ನೂರು ಆಡುಗಳನ್ನು ವಧುದಕ್ಷಿಣೆಯಾಗಿ ಪಡೆದಿದ್ದನಂತೆ. ಬೇಡವೆಂದರೂ ಬಲವಂತದಿಂದ ಮದುವೆ ಮಾಡಲು ಮುಂದಾದಾಗ ಕಾಲನ್ನು ಕುಯ್ದುಕೊಂಡು ಋತುಸ್ರಾವವಾಗಿದೆ ಎಂದು ಮನೆಯವರನ್ನು ನಂಬಿಸಿ, ನೈರೋಬಿಗೆ ಓಡಿ ಹೋಗುವ 'ನಾವಿ', ಅಲ್ಲಿ ಶಿಕ್ಷಣ ಪಡೆದು, ತನ್ನ ಪ್ರಾಂತ್ಯದ ಹೆಣ್ಣುಮಕ್ಕಳನ್ನು ಬಾಲ್ಯವಿವಾಹದ ಸಂಕೋಲೆಯಿಂದ ಬಿಡಿಸುವ ಸಾಹಸ ಮೆರೆಯುತ್ತಾಳೆ.

'ನಾವಿ'ಯ ಪಾತ್ರದಲ್ಲಿ ಮಿಂಚಿರುವ ಮಿಷೆಲ್, ಆಡಿಷನ್ ನಡೆದಾಗ ಶಾಲೆಯ ನಾಟಕವೊಂದರಲ್ಲಿ ನಟಿಸಲು ಇರಬಹುದು ಎಂದು ಪಾತ್ರಧಾರಿಯಾಗಲು ಒಪ್ಪಿಕೊಂಡಳಂತೆ. ಅದುವರೆಗೆ ಆಕೆ ಯಾವೊಂದು ಸಿನಿಮಾದಲ್ಲೂ ನಟಿಸಿದವಳಲ್ಲ. 'ಈ ನಟನೆ ನನ್ನ ಬದುಕನ್ನೇ ಬದಲಾಯಿಸಿದೆ. ಆದರೆ, ನನ್ನ ವ್ಯಕ್ತಿತ್ವವನ್ನು ಬದಲಾಯಿಸಲು ನಾನು ಅವಕಾಶವನ್ನು ನೀಡಲಾರೆ' ಎಂದು ಪ್ರಬುದ್ಧ ಹೇಳಿಕೆ ನೀಡುತ್ತಾಳೆ ಮಿಷೆಲ್. 'ನಮ್ಮ ಈ ಸಿನಿಮಾವನ್ನು ನೀವು ನೋಡುವಾಗ, 'ನಾವಿ'ಯಾಗಿ ನೋಡಿ. 6.4 ಕೋಟಿ ಹದಿಹರೆಯದ ಹೆಣ್ಣುಮಕ್ಕಳೇ ನೀವಾಗಿ ನೋಡಿ. ಆಗ ನಮ್ಮ ಭಾವನೆ ಏನು ಎಂಬುದು ನಿಮಗೆ ಅರ್ಥವಾಗುತ್ತದೆ' ಎಂದೂ ಹೇಳುತ್ತಾಳೆ.

'ಆಫ್ರಿಕಾದ ಈ ಭಾಗದ ಹೆಣ್ಣುಮಕ್ಕಳಿಗೆ ಯಶಸ್ಸು ಎನ್ನುವುದು ಹೇಗೆ ಬಿಸಿಲ್ಗುದುರೆಯಂತೆ ಕೈಗೆ ಸಿಗದೆ ಮುಂದೆ ಓಡುತ್ತದೆ ಎಂಬುದನ್ನು ನಾನು ಅನುಭವಿಸಿ ಬಲ್ಲೆ. ಹೆಜ್ಜೆ ಹೆಜ್ಜೆಗೂ ನೂರೆಂಟು ಅಡೆತಡೆಗಳು. ಅಂತಹ ಅಡೆತಡೆಗಳ ನಡುವೆಯೂ ದೊಡ್ಡ ಕನಸನ್ನು ಕಂಡವಳು, ಕಾಣುತ್ತಿರುವವಳು ನಾನು' ಎಂದು ಮಿಷೆಲ್ ಹೇಳುವಾಗ, ಅವಳ ಕಣ್ಣುಗಳಲ್ಲಿ ಸಾವಿರ ವ್ಯಾಟ್ ಬಲ್ಬು ಹೊತ್ತಿ ಉರಿದಷ್ಟು ತೇಜಸ್ಸು ಪ್ರತಿಫಲಿಸುತ್ತದೆ. ತನ್ನ ಈ ಹಿನ್ನೆಲೆಯ ಪರಿಧಿಯೊಳಗೆ ತಾನು ಸಿಕ್ಕಿ ಬೀಳಬಾರದು ಎಂಬ ಉತ್ಕಟ ಹಂಬಲದಿಂದಲೇ ಆಕೆ, ಸಿನಿಮಾ ಆಡಿಷನ್‌ನಲ್ಲಿ ಪಾಲ್ಗೊಂಡು, 'ನಾವಿ'ಯ ಪಾತ್ರಧಾರಿಯಾಗಿ ಆಯ್ಕೆಯಾದವಳು. ಶಾಲಾ ವಿದ್ಯಾರ್ಥಿನಿಯಾಗಿ ನಟನೆಯಲ್ಲಿ ತೊಡಗಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಏಕೆಂದರೆ, ಕಲೆಯಲ್ಲಿ ತೊಡಗಿಸಿಕೊಳ್ಳುವುದು ಎಷ್ಟು ಮುಖ್ಯವೋ ಓದು ಕೂಡ ಅಷ್ಟೇ ಮುಖ್ಯ. ಆದರೆ, ಮಿಷೆಲ್ ಓದಿನಲ್ಲೂ ಮುಂದಿದ್ದು, ನಟನೆಯಲ್ಲೂ ಸೈ ಎನಿಸಿಕೊಂಡವಳು. ಕೆನ್ಯಾದಂತಹ ದೇಶದಲ್ಲಿ ಶಿಕ್ಷಣದ ಮಹತ್ವ ಏನು ಎಂಬುದನ್ನು ಅರಿತವಳು.

ತುರ್ಕಾನಾ ಪ್ರಾಂತ್ಯದಿಂದ ಉನ್ನತ ಶಿಕ್ಷಣದ ಕನಸು ಕಂಡು ನೈರೋಬಿಗೆ ಬಂದು ನೆಲಸಿದ ಮಿಷೆಲ್, ಅಲ್ಲಿಯೂ ಸವಾಲುಗಳನ್ನು ಎದುರಿಸಿದಳು. ಸಹಪಾಠಿಗಳಿಂದ ಆಕೆ ಗೇಲಿಗೆ ಒಳಗಾದಳು. ದೇಹದ ಕಪ್ಪುಬಣ್ಣ, ಕೌಟುಂಬಿಕ ಹಾಗೂ ಅತೀ ಹಿಂದುಳಿದ ಪ್ರಾಂತ್ಯದ ಹಿನ್ನೆಲೆಯಲ್ಲಿ ಕೀಳರಿಮೆಯಿಂದ ನೋಡುವ ಪ್ರಯತ್ನಗಳಾದಾಗ ವಿಹ್ವಲಗೊಂಡರೂ ಮಿಷೆಲ್, ಕೈಚೆಲ್ಲಿ ಕೂರಲಿಲ್ಲ. 'ನಮ್ಮೊಳಗಿನ ಸೌಂದರ್ಯವೇ ನಿಜವಾದ ಸೌಂದರ್ಯ' ಎಂದು ಲೇಖಕರೊಬ್ಬರು ಬರೆದ ವಾಕ್ಯ, ಆಕೆಗೆ ಎಲ್ಲ ಗೇಲಿಯಿಂದ, ಅದರ ಕರಿನೆರಳಿನಿಂದ ಹೊರಬರಲು ನೆರವಿಗೆ ಬಂತು. 'ಯಾವ ಗೇಲಿಯಿಂದಲೂ ನಾನು ಯಾರು ಎಂಬುದನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ' ಎಂದೆನ್ನುವ ಈ ತಾರೆ, 'ನಕಾರಾತ್ಮಕ ಸಂಗತಿಗಳನ್ನು ತೊಡೆದು ಹಾಕುವುದು ಅಷ್ಟು ಸುಲಭವಲ್ಲವಾದರೂ ನನ್ನ ಮೌಲ್ಯವೇನು ಎಂಬುದನ್ನು ತೋರಿಸುವ ಏಕೈಕ ಛಲ ನನ್ನ ಕೈಹಿಡಿದು ಮುನ್ನಡೆಸಿತು' ಎನ್ನುತ್ತಾಳೆ. 'ಯಾರದ್ದೇ ಅಭಿಪ್ರಾಯಗಳು ನಮ್ಮ ಕನಸುಗಳನ್ನು ಕೊಲ್ಲುವ ಆಯುಧಗಳಾಗಲು ಆಸ್ಪದ ನೀಡಬಾರದು' ಎಂಬ ಕಿವಿಮಾತನ್ನು ತನ್ನ ವಾರಿಗೆಯ ಹೆಣ್ಣುಮಕ್ಕಳಿಗೆ ನೀಡುತ್ತಾಳೆ.

ನಮ್ಮ ನಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಲು ನಾವು ಸಮರ್ಥರಿದ್ದೇವೆ ಎನ್ನುವುದು ಮಿಷೆಲ್ ಇಟ್ಟಿರುವ ಅಚಲ ನಂಬಿಕೆ. ನಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಟ್ಟು ಮುಂದುವರಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎನ್ನುವ ಆಕೆ, ಕೆನ್ಯಾದಲ್ಲಿ ಮಾತ್ರವಲ್ಲ, ಆಫ್ರಿಕಾದಲ್ಲಿ ಅಷ್ಟೇ ಅಲ್ಲ, ಜಗತ್ತಿನಲ್ಲೇ ಬಾಲ್ಯವಿವಾಹ ಸಂಪೂರ್ಣವಾಗಿ ನಿಲ್ಲಬೇಕು. ಆಡುವ ಮಕ್ಕಳ ಕೈಗೆ ಕಂದಮ್ಮಗಳನ್ನು ಕೊಡುವ ಕೆಲಸಕ್ಕೆ ಕೊನೆ ಹಾಡಬೇಕು ಎಂದು ಆಗ್ರಹಿಸುತ್ತಾಳೆ. 'ನಾವಿ'ಯ ಮಾತಿಗೆ ಕಿವಿಯಾಗುವ ಕೆಲಸ ಜಗತ್ತಿನ ಎಲ್ಲ ಜನ ಸಮುದಾಯಗಳಿಂದಲೂ ಆಗಬೇಕಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65